ಒಂದೇ ಯೋಚನೆ ಮೂಡಿತ್ತು; ಒಂದೆರಡು ಸಲ ಕ್ಲಬ್‌ಗೆ ಹೋಗಿಬಂದದ್ದು ಬಿಟ್ಟರೆ, ಪ್ರಾಪರ್ಟಿಗೀಪರ್ಟಿ ತಲೆನೋವೆಲ್ಲ ಬ್ಯಾಡ ಅಂತಿದ್ದ ಇವರು ಇಷ್ಟು ಬೇಗ, ಯಾವ ಮಾಯದಲ್ಲಿ, ಎಲ್ಲಿ ಪ್ರಾಪರ್ಟಿ ನೋಡಿಕಂಡು ಬಂದರು! ಸುನಂದಮ್ಮನವರಿಗೆ ಅಯೋಮಯ ಅನಿಸಿ ಸಂತೋಷವೂ ಆಯಿತು. ಮುಕುಂದ ಕೂಡ ಉತ್ಸಾಹದಲ್ಲಿ ತನ್ನ ಪಲ್ಸರ್ ತೆಗೆಯಲು ಗರಾಜಿನ ಕಡೆಗೆ ಹೋದ.

ಊಟದ ನಂತರ ಕೃಷ್ಣೇಗೌಡರು ಹೆಂಡತಿಗೆ 'ನೀನು ರೆಡಿಯಾಗು' ಅಂದರು.

'ಈಗ ನೀವಿಬ್ಬರೂ ಹೋಗಿ ನೋಡಿಕೊಂಡು ಬರ್ರಿ, ಎಲ್ಲ ಸರಿಯಾದರೆ ಇನ್ನೊಂದು ಸಲ ಹೋಗಣ. ಮೂರು ಜನ ಆಗ್ತೀವಿ, ಸರಿಯಾಗಲ್ಲ' ಅಂದರು.



ಮುಕುಂದನೇ ಕಾರು ತೆಗೆದ. 'ದೇವೇಗೌಡ ಪೆಟ್ರೋಲ್ ಬಂಕ್ ಹತ್ರ ಲೆಫ್ಟ್ ತಗೊಂಡು ಪದ್ಮನಾಭನಗರದ ಕಡೆ ಹೋಗುವಾಗ ಒಂದು ಪಾರ್ಕು, ಒಂದು ಸ್ಕೂಲ್ ಸಿಗುತ್ತಲ್ಲ ಅಲ್ಲಿಗೆ ಜಿಪಿಎಸ್ ಹಾಕು, ಆಮೇಲೆ ನಾನು ತೋರಿಸ್ತೀನಿ' ಅಂದರು. 'ನಂಗೊತ್ತು, ಜಿಪಿಎಸ್ ಏನೂ ಬ್ಯಾಡ' ಅಂದು ಕಾರು ಸ್ಟಾರ್ಟ್ ಮಾಡಿದ ಮುಕುಂದ.

ಅಷ್ಟೇನೂ ಟ್ರಾಫಿಕ್ ಇಲ್ಲದಿದ್ದರೂ ನಲವತ್ತು ನಿಮಿಷದ ದಾರಿಯಾಗಿತ್ತು. ಅಲ್ಲಿಂದ ಮುಂದೆ ಎಡಭಾಗದ ಅಪ್ಪ ತೋರಿಸಿದ ರಸ್ತೆಯಲ್ಲಿ ಸ್ವಲ್ಪ ದೂರ ಹೋದ ಮೇಲೆ ಮತ್ತೆ ಎಡಕ್ಕೆ ತಿರುಗಿದ ನಂತರ ಅವರು ತೋರಿಸಿದ ಕಾಂಪೌಂಡಿನ ಮುಂದೆ ಗಾಡಿ ನಿಲ್ಲಿಸಿದ. ಗೇಟಿನ ಮೇಲೆ ದೊಡ್ಡ ಅಕ್ಷರಗಳಲ್ಲಿ ಇಂಗ್ಲಿಷಿನಲ್ಲಿ ಟೈಪ್ ಮಾಡಿ ರಟ್ಟಿನ ಮೇಲೆ ಅಂಟಿಸಿದ್ದರಲ್ಲಿ, 'ಫಾರ್ ಲೀಸ್/ಸೇಲ್' ಎಂಬುದರ ಕೆಳಗೆ, 'ನೋ ಬ್ರೋಕರ್ಸ್' ಎಂದಿತ್ತು. ಮನೆ ಮುಂದಿನ ರಸ್ತೆಯಲ್ಲಿ ಗೇಟಿನ ಅಕ್ಕಪಕ್ಕ ಆಕಾಶಮಲ್ಲಿಗೆ ಮರಗಳಿದ್ದವು. ಹೂವುಗಳು ಉದುರಿ ಚಂದವಾಗಿ ಕಾಣುತ್ತಿತ್ತು.

ಕಾಂಪೌಂಡಿನ ಒಳಗೂ ಒಂದು ಆಕಾಶ ಮಲ್ಲಿಗೆ ಮರ ಎತ್ತರಕ್ಕೆ ಬೆಳೆದಿತ್ತು. ಸೈಟಿನ ಹಿಂಭಾಗಕ್ಕೆ ಸುಮಾರಾದ ಒಂದು ಮನೆ, ಮೇಲೊಂದು ಬಾಲ್ಕನಿ ಕಾಣುತ್ತಿತ್ತು. ಆಕಾಶ ಮಲ್ಲಿಗೆ ಹೂವುಗಳು ಹರಡಿಕೊಂಡಿದ್ದ ನೆಲ ಮತ್ತು ಪರಿಮಳ ಮುಕುಂದನಿಗೆ ಮನಸ್ಸಿಗೆ ಹಿಡಿಸಿತು. ಆದರೆ ಮೊದಲ ನೋಟಕ್ಕೆ ಪ್ರಾಪರ್ಟಿ ಇಷ್ಟವಾಗದೆ ನಿರಾಶನಾದ. 'ಬ್ರೋಕರೇಜೇ ಲಕ್ಷಗಳಾಗಿಬಿಡುತ್ತೆ, ಆ ತಾಪತ್ರಯ ತಪ್ಪುತ್ತೆ, ಇಳಿಯಣ' ಅಂದ ಅಪ್ಪನ ಮಾತಿಗೆ ಬೆಲೆ ಕೊಡಲು ಕಾರಿನಿಂದ ಇಳಿದ. ಗೇಟ್ ತೆಗೆದು ಐದಾರು ಹೆಜ್ಜೆ ಮುಂದೆ ಹೋದ ಅಪ್ಪ ಹಿಂತಿರುಗಿ ಕಾಂಪೌಂಡಿನ ಒಳಗೆ ಮತ್ತು ಗೇಟಿನ ಆಚೆ ಎತ್ತರಕ್ಕೆ ಬೆಳೆದು ನಿಂತಿದ್ದ ಆಕಾಶ ಮಲ್ಲಿಗೆ ಮರಗಳಲ್ಲಿ ಇಳೆಬಿದ್ದಿದ್ದ ಹೂವುಗಳನ್ನು ಒಮ್ಮೆ, ಮರಗಳ ಕೆಳಗೆ ಹರಡಿಕೊಂಡಿದ್ದ ಹೂವುಗಳ ಕಡೆಗೊಮ್ಮೆ ತುಂಬು ಮೆಚ್ಚುಗೆಯ ನೋಟ ಹರಿಸಿದ್ದನ್ನು ಅವರ ಹಿಂದೆಯೇ ನಿಂತ ಮುಕುಂದ ನೋಡಿ ತನಗೂ ಚಂದವಾಗಿ ಕಂಡದ್ದನ್ನು ಮನಸ್ಸಿಗೆ ತಂದುಕೊಂಡ. ಮನೆ ಬಾಗಿಲಿನ ಪಕ್ಕದಲ್ಲಿದ್ದ ಬೆಲ್ ಮಾಡಿದರು.

ಬಾಗಿಲು ತೆಗೆದ ವ್ಯಕ್ತಿಗೆ ಲೀಸ್/ಮಾರಾಟದ ಬೋರ್ಡ್ ಹಾಕಿದ ಮೇಲೆ ವಿಚಾರಿಸುವವರು ಬಂದು ಹೋಗುವುದು ಮಾಮೂಲಾಗಿತ್ತು ಎಂಬುದು ಅವರ ಮುಖಭಾವದಲ್ಲಿ ಎದ್ದು ಕಾಣುತ್ತಿತ್ತು. ಇವರಿಬ್ಬರಿಗೂ ತಮ್ಮ ಪರಿಚಯ, ಓನರ್ ಪರಿಚಯ ಇತ್ಯಾದಿಗಳ ಕಡೆ ಮನಸ್ಸಿದ್ದರೂ, ಓನರ್‌ನಲ್ಲಿ ನೇರವಾಗಿ ವಿಷಯಕ್ಕೆ ಬರುವ ಆತುರ ಕಾಣಿಸಿತು. 'ನೋಡಿ ಇವರೆ, ಸಿಕ್ಸ್ಟಿ ಫಾರ್ಟಿಗಿಂತ ಸ್ವಲ್ಪ ಜಾಸ್ತಿನೇ ಇದೆ. ಮುಂದುಗಡೆ ಮೂರಂತಸ್ತಿನ ಒಳ್ಳೆ ಮನೆ ಕಟ್ಟಬಹುದು, ಬೇಕಾದರೆ ಈ ಮನೆಯನ್ನ ಔಟ್ ಹೌಸಾಗಿಯೇ ಇಟ್ಟುಕೋಬೌದು... ನಿಮ್ಮಿಷ್ಟ ಹೇಗೆ ಬೇಕಾದರೂ ಮಾಡ್ಕೋಬೌದು. ಬ್ರೋಕರುಗಳು ಚದರಡಿ ಲೆಕ್ಕದಲ್ಲೇ ಮಾತಾಡ್ತಾರೆ. ನನಗೆ ಅವರ ಸವಾಸನೇ ಬ್ಯಾಡ. ಅವರು ನಿಮಗೊಂದು ರೇಟ್ ಹೇಳಿರ್ತಾರೆ, ನಮಗೊಂದು ರೇಟ್ ಹೇಳಿರ್ತಾರೆ; ಮಾರೋರು ಕಮಿಷನ್